ಯೋಧನನ್ನು ಎಬ್ಬಿಸಿರಿ

ದರ್ಶನ

ಅನೇಕ ವರ್ಷಗಳ ಹಿಂದೆ ಸೋನೊರಾದಲ್ಲಿ ನಾವು ಮಿಷನರೀಗಳಾಗಿ ನಾವು ಸೇವೆಯನ್ನು ಮಾಡಿದ್ದೆವು. ಅನೇಕ ಗ್ರಾಮಗಳಿಗೆ ಹೋಗುವಾಗ ಆ ದಾರಿಗಳಲ್ಲಿ ನಾವು ಹೋಗುತ್ತಿರುವಾಗ ನನ್ನ ಮುಖದ ಮೇಲೆ ಧೂಳಿ ಹಾರಿ ಹೋಗುತ್ತಿತ್ತು. ಎಲ್ ಡಿಯಾಮೆಂಟೆ, ಕಾರ್ಬೋಕ್ಕಾ, ಸನ್ ಫಿಲಿಪೆ, ಎಲ್ ಅಲ್ಟಿಮೆ ಎಸ್ಫಾರ್ಜೆ... ಇನ್ನೂ ಅನೇಕವಾದ ಪಟ್ಟಣಗಳಿಗೆ ಹೋಗಿ ನಾವು ಕೆಲಸ ಮಾಡಿದ್ದೆವು. ಮತ್ತೊಮ್ಮೆ ಜನರೆಲ್ಲರನ್ನು ಮತ್ತು ಅವರ ಕುಟುಂಬದಲ್ಲಿರುವ ಮುಖಗಳನ್ನು ನೋಡಿ, ಅವರಿಗೆ ಶುಭಾಶಯಗಳು ಹೇಳುವುದಕ್ಕೆ ತುಂಬಾ ಕುತೂಹಲದಿಂದ ಇರುತ್ತಿದ್ದೆ. ಏನು ಬದಲಾಗಿರುತ್ತದೆ?

ರಹದಾರಿಗಳೆಲ್ಲವು ಒಂದೇ ರೀತಿಯಾಗಿ ಕಾಣಿಸಿಕೊಳ್ಳುತ್ತವೆ, ಎಲ್ಲಾ ಕಡೆಗಳಲ್ಲಿ ಪಾಪಾಸು ಕಳ್ಳಿಗಿಡಗಳಿಂದ ತುಂಬಿರುತ್ತದೆ. ಏನೇಯಾಗಲಿ, ಸಂಡೇ ಸ್ಕೂಲ್ ತರಗತಿಯಲ್ಲಿ ನಾನು ಬೋಧಿಸಿದ ಮಕ್ಕಳೆಲ್ಲರು ಈಗ ಬೆಳೆದಿರಬಹುದು. ಅವರಲ್ಲಿ ಕೆಲವರನ್ನಾಗಲಿ ನಾನು ಕಾಣುತ್ತೇನೆನ್ನುವ ನಿರೀಕ್ಷೆಯಿದೆ ಮತ್ತು ಅವರ ಜೀವನಗಳನ್ನು ನೋಡುತ್ತೇನೆನ್ನುವ ಆಸೆ ನನ್ನಲ್ಲಿದೆ.

ಈಐ ಕೊಯೋಟೆನಲ್ಲಿ ನಾವೆಲ್ಲರು ಒಂದು ಕಡೆಗೆ ಬಂದು ಸೇರುತ್ತಿದ್ದೆವು, ಮತ್ತು ನನ್ನ ಕರಳು ಸ್ಪಾಗೆಟ್ಟಿಯಂತೆ ಆಗಿತ್ತು. ಅದು ತುಂಬಾ ಆಸಕ್ತಿಕರವಾಗಿತ್ತು, ಆದರೆ ಎಲ್ಲರು ಭಯದಿಂದ ನಡುಗುತ್ತಿದ್ದರು. ಈ ಚಿಕ್ಕ ಗ್ರಾಮದಲ್ಲಿರುವ ಜನರಿಗಾಗಿ ಅನೇಕ ವರ್ಷಗಳ ಕಾಲ ನನ್ನ ಜೀವನವನ್ನೇ ಸುರಿದಿದ್ದೇನೆ. ನಾವು ಸಂದರ್ಶಿಸಿದ ಮೊಟ್ಟ ಮೊದಲ ಮನೆಯಲ್ಲಿರುವ ಜನರು ಉತ್ಸಾಹದಿಂದ ಹಾಡುಗಳನ್ನು ಹಾಡುತ್ತಾ, ನಮ್ಮೆಲ್ಲರನ್ನೂ ಅಪ್ಪಿಕೊಳ್ಳುತ್ತಾ ಇದ್ದರು. ನನ್ನ ವಿದ್ಯಾರ್ಥಿಗಳ ಕುರಿತಾಗಿ ನಾನು ಕೇಳಿದೆ. ನನ್ನ "ಆಂಟಿ" ಸೋಫಿಯಾ ರವರು ಗಂಭೀರ ಮುಖದಿಂದ ಇದ್ದರು. ಆಕೆ ನಡೆದಿರುವ ಎಲ್ಲಾ ಕೆಟ್ಟ ಸುದ್ದಿಗಳನ್ನು ಒಂದೇಸಲ ಹೇಳುವುದಕ್ಕೆ ಪ್ರಯತ್ನಿಸಲಿಲ್ಲ.

ನಾವು ಸಂದರ್ಶಿಸಿದ ಇನ್ನೊಂದು ಮನೆಯಲ್ಲಿ, ನನ್ನ ತರಗತಿಯಲ್ಲಿದ್ದ ಒಬ್ಬ ಹುಡುಗಿ ತನ್ನ ಮಡಿಲಲ್ಲಿ ಕೂಸನ್ನು ಇರಿಸಿಕೊಂಡಿರುವುದನ್ನು ನೋಡಿದಾಗ, ಆ ಮನೆಯಲ್ಲಿ ಎಲ್ಲರು ಮೌನವಾಗಿದ್ದರು ಮತ್ತು ನಾಚಿಕೆಪಡುತ್ತಿದ್ದರು. ಆ ಹುಡುಗಿ ಕ್ರೈಸ್ತನಾಗದ ಒಬ್ಬ ಹುಡುಗನೊಂದಿಗೆ ಮನೆ ಬಿಟ್ಟು ಓಡಿ ಹೋಗಿದ್ದಳು, ಆದರೆ ಅವರು ಮದುವೆ ಮಾಡಿಕೊಂಡಿರಲಿಲ್ಲ. ಆದರೆ ಇಬ್ಬರು ಒಂದೇ ಸ್ಥಳದಲ್ಲಿ ವಾಸವಾಗಿದ್ದರು. ಅವಳು ಆ ಸ್ಥಳದಲ್ಲಿ ಯಾವ ಸಭೆಗೂ ಹೋಗುತ್ತಿದ್ದಿಲ್ಲ.

ಅಲ್ಲಿಂದ ಪ್ರತಿಯೊಂದು ಕಥೆಯನ್ನು ಸೇರಿಸಿಕೊಂಡು ಬಂದೆ, ಮತ್ತು ನಾವು ಸಂದರ್ಶಿಸಿದ ಇತರ ಮನೆಗಳಿಗೆ ಹೋದಾಗ, ನನ್ನ ಹೊಟ್ಟೆಯಲ್ಲಿ ಸ್ಪೆಗಟ್ಟಿ ಇರುವಂಥದ್ದು ಸಿಮೆಂಟ್.ಯಾಗಿ ಮಾರ್ಪಟ್ಟಿತು. ನಾನು ಕೆಲಸ ಮಾಡಿದ ಮಕ್ಕಳು ಕರ್ತನ ಜೊತೆಯಲ್ಲಿ ಇಲ್ಲ. ಒಬ್ಬರು ಕೂಡ ಕರ್ತನಿಗಾಗಿ ಬಾಳುವವರು ಇಲ್ಲ. ಯಾವ ತಪ್ಪು ನಡೆದಿತ್ತೋ ಗೊತ್ತಿಲ್ಲ?

ಒಬ್ಬರು ಕೂಡ ಕರ್ತನಿಗಾಗಿ ಬಾಳುವವರು ಇಲ್ಲ. ಯಾವ ತಪ್ಪು ನಡೆದಿತ್ತೋ ಗೊತ್ತಿಲ್ಲ?

ಇದೆಲ್ಲಾ ನಿಮಗೆ ಗೊತ್ತೆಂದು ನನಗೆ ನಿಶ್ಚಯತೆಯಿದೆ, ಆದರೆ ನಾವೀಗ ಸದ್ಯಕ್ಕೆ ಕತ್ತಲಿನ ಶಕ್ತಿಗಳ ವಿರುದ್ಧವಾಗಿ ಯುದ್ಧ ಮಾಡುತ್ತಿದ್ದೇವೆ. ಯೇಸು ಕ್ರಿಸ್ತ ನಮ್ಮ ಕಮಾಂಡರ್ (ಅಜ್ಞಾಪಿಸುವಾತನು) ಮತ್ತು ಅವರಿಗೆ ಜನರ ಸೈನ್ಯವಿದೆ; ಅದು ಇಡೀ ಪ್ರಪಂಚವೆಲ್ಲಾ ಆವರಿಸಿಕೊಂಡಿದೆ, ಈ ಭೂಗ್ರಹದ ಮೇಲಿರುವ ಪ್ರತಿಯೊಂದು ಭಾಷೆಯನ್ನು ಮಾತನಾಡುತ್ತಾರೆ. ದೇವರಿಗೆ ವಾಯು ಸೈನ್ಯವಿದೆ, ನೌಕಾಪಡೆಗಳಿವೆ, ನೌಕಾ ದಳಗಳಿವೆ ಮತ್ತು ಪಾಯದಳವೂ ಇದೆ. ಭೂಮಿಯ ಮೇಲಿರುವ ಮಿಲಟರೀ ಗಳಿಗಿಂತ ಹೆಚ್ಚಾಗಿ ಆತನ ಬಳಿ ಇವೆ ಮತ್ತು ಅವರು ಶತ್ರುವಿನೊಂದಿಗೆ ಇರುವ ಯುದ್ಧ ಭೂಮಿಯ ಮಧ್ಯದಲ್ಲಿ ಅವರು ನಿಂತುಕೊಂಡಿದ್ದಾರೆ. ಈ ಭೂಮಿಯ ಮೇಲಿರುವ ಪ್ರತಿಯೊಂದು ಜೀವನಕ್ಕಾಗಿ ಆತನು ಯುದ್ಧ ಮಾಡುತ್ತಿದ್ದಾನೆ. ದೇವರು ನಮಗೆ ಕೊಟ್ಟಿರುವ ಸ್ಥಳಗಳಲ್ಲಿ ನಾವು ಸೇವೆಯಲ್ಲಿ ಪಾಲ್ಗೊಳ್ಳಬೇಕೆಂದು ದೇವರು ನಮ್ಮಿಂದ ಬಯಸುತ್ತಿದ್ದಾರೆ ಮತ್ತು ನಮ್ಮ ಜೀವನಗಳ ಅದರ ಮೇಲೆ ಆಧಾರಪಟ್ಟಿವೆಯೆಂದು ಹೋರಾಟ ಮಾಡಬೇಕು.

ಯಾಕಂದರೆ ಅದರ ಮೇಲೆ ಆಧಾರಪಡುವದರಿಂದ ಅನೇಕ ಜೀವನಗಳು ಯುದ್ಧ ಮಾಡುತ್ತಿವೆ.

ನಾವು ಇನ್ನೊಂದು ತಲಾಂತರಕ್ಕಾಗಿ ಅಂದರೆ ನಮ್ಮ ಮಕ್ಕಳಿಗಾಗಿ ಮಾಡುವ ಯುದ್ಧವೇ ಅತೀ ದೊಡ್ಡ ಯುದ್ಧವೆಂದು ನಾನು ನಂಬುತ್ತಿದ್ದೇನೆ. ವಿಚಾರಕರವಾಗಿ, ಶತ್ರುವೇ ಗೆಲ್ಲುತ್ತಿದ್ದಾನೆ. ಅದನ್ನು ನಾನು ಹೇಗೆ ಹೇಳುತ್ತಿದ್ದೇನೆ? ಯಾಕಂದರೆ, ಎಲ್ಲಾ ನಟನೆಗಳನ್ನು ನೋಡಿ ನಾನು ಸೋತು ಹೋಗಿದ್ದೇನೆ. ನೀವು ಸುಮ್ಮನೆ ನಿಮ್ಮ ಸುತ್ತಮುತ್ತವುಗಳನ್ನು ಪರಿಶೀಲನೆ ಮಾಡಿರಿ. ಟಿ.ವಿ. ಎನ್ನುವುದು ಮಕ್ಕಳ ಹತ್ತಿರ ಶತ್ರುವಿನ ಬೆಲೆಗಳನ್ನು ಕಿರಿಚಿ ಹೇಳುತ್ತಿದೆ, ಅದೇ ರೀತಿಯಾಗಿ ವೀಡಿಯೋ ಆಟಗಳು ಮತ್ತು ಪಾಠಶಾಲೆಯಲ್ಲಿ ಅವರು ಕಲಿತುಕೊಳ್ಳುವ ಸಂದೇಶಗಳೆಲ್ಲವೂ ಮಕ್ಕಳನ್ನು ಮಾರ್ಪಡಿಸುತ್ತಿವೆ. ನಾವು ಭಾನುವಾರದಂದು ಕಳೆಯುವ ಎರಡು ಗಂಟೆಗಳಿಗೆ ಹೋಲಿಸಿಕೊಂಡರೆ ಪ್ರತಿದಿನ ಮಕ್ಕಳನ್ನು ಕೆಡಿಸುವ ಅನೇಕ ಗಂಟೆಗಳು ಕಾದುಕೊಂಡಿವೆ. ಕ್ರಿಸ್ತನನ್ನು ಹಿಂಬಾಲಿಸುವುದಕ್ಕೆ ಮಕ್ಕಳು ಇಷ್ಟಪಡದ ಅನೇಕ ಸಭೆಗಳು ನನಗೆ ಗೊತ್ತು. ಅವರು ಯೌವನಸ್ಥರ ಗುಂಪಿನಲ್ಲಿ ಸೇರಿಕೊಂಡಿರುತ್ತಾರೆ, ಯಾಕಂದರೆ ಅದು ತುಂಬಾ ಹೆಚ್ಚು ವಿನೋದವು ಇರುತ್ತದೆ, ಆದರೆ ಸಭೆಯ ಸಹವಾಸಕ್ಕೆ ಹೋಗಬೇಕೆಂದು ಅವರ ಸ್ವಂತ ನಿರ್ಣಯಕ್ಕೆ ಬರುವಾಗ, ಅವರು ಸಭೆಗೆ ಬರುವುದನ್ನು ನಿಲ್ಲಿಸುತ್ತಾರೆ.

ಮಕ್ಕಳ ಸೇವೆಯೆನ್ನುವುದು ಅಷ್ಟು ಸುಲಭವಾದ ಸೇವೆಯಲ್ಲ ಮತ್ತು ಖಂಡಿತವಾಗಿ ಬಲಹೀನವಾದದ್ದಲ್ಲ. ಮಕ್ಕಳ ಸೇವೆಗೆ ಅನೇಕಮಂದಿ ತೀವ್ರವುಳ್ಳ ಜೆನೆರಲ್ಸ್ ಬೇಕೇ ಬೇಕು, ಮತ್ತು ಅವರಲ್ಲಿ ನೀವೂ ಒಬ್ಬರಾಗಿರಬಹುದು.

ಕ್ರಿಸ್ತನ ದೇಹಕ್ಕಾಗಿ ಅನೇಕ ವಿಷಯಗಳನ್ನು ಪರಿಶೋಧಿಸುವ ಅತೀ ದೊಡ್ಡ ಕಂಪನಿ ಬರ್ನಾ ಗ್ರೂಪ್ ಎಂದು ಹೇಳಬಹುದು. ಒಬ್ಬ ಮಗುವು ತನ್ನ 12ನೇ ವಯಸ್ಸಿನಲ್ಲಿ ಏನನ್ನು ನಂಬುತ್ತಾನೋ ಅದನ್ನೇ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತಾನೆಂದು ಅವರ ಅಧ್ಯಯನಗಳು ಹೇಳುತ್ತಿವೆ! ಈ ಅಧ್ಯಯನವನ್ನು ಮಾಡಿದ್ದಕ್ಕಾಗಿ ಬರ್ನಾ ರವರನ್ನು ನಾನು ಅಭಿನಂದಿಸುತ್ತಿದ್ದೇನೆ ಮತ್ತು ಇದನ್ನು ನಾನು ನಿಜ ಜೀವನದೊಂದಿಗೆ ಅನ್ವಯಿಸಿ ನಿರೂಪಿಸುತ್ತೇನೆ. ನಿಮ್ಮ ಮಕ್ಕಳು 12ನೇ ವಯಸ್ಸಿಗೆ ಬರುವುದಕ್ಕೆ ಮುಂಚಿತವಾಗಿ ಅವರನ್ನು ನೀವು ತರಬೇತಿಗೊಳಿಸದಿದ್ದರೆ, ಅದಾದನಂತರ ಅವರ ಮನಸ್ಸನ್ನು ಮಾರ್ಪಡಿಸುವುದು ತುಂಬಾ ಕಷ್ಟವೆಂದು ನಾವು ಸುಲಭವಾಗಿ ಹೇಳಬಹುದು.

ಕ್ರಿಸ್ತನ ದೇಹವಾಗಿರುವ ನೀವು ಮತ್ತು ನಾನು ಮತ್ತು ಪ್ರತ್ಯೇಕವಾಗಿ ಮಕ್ಕಳ ಸೇವೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ, ಪ್ರಪಂಚದಲ್ಲಿರುವ ಪ್ರತಿಯೊಂದು ದೇಶದಿಂದ ಮತ್ತು ಪ್ರತಿಯೊಂದು ಶಾಖೆಯಿಂದ ತಪ್ಪದೇ ಪ್ರತಿಯೊಬ್ಬರೂ ನಮ್ಮ ಮಕ್ಕಳಿಗಾಗಿ ನಾವು ಮೆಟ್ಟಿಲು ಹತ್ತಿ, ಹೋರಾಡಲೇ ಬೇಕು. ಈ ದೊಡ್ಡ ಯುದ್ಧದಲ್ಲಿ ನಾವು ಮೊದಲನೇ ಸಾಲಿನಲ್ಲಿ ನಿಲ್ಲಬೇಕು. ಇದಕ್ಕಾಗಿ ನಾವೆಲ್ಲರು ಸೇರಿ ಏನಾದರೊಂದು ಮಾಡುವ ವೇಳೆಯಾಗಿದೆ.

ದೇವರ ಸೈನ್ಯಕ್ಕಾಗಿ ನಾವು ಕೆಲವರು ಸೇನಾಪತಿಗಳನ್ನು ತಯಾರಿಸಬೇಕಾದ ಸಮಯವಿದು. ಸರ್ಜೆಂಟ್ಸ್, ಸರ್ಜೆಂಟ್ಸ್ ಮೇಜರ್ಸ್, ಕಾರ್ಪೋರಲ್ಸ್, ಮೇಜರ್ಸ್ ಮತ್ತು ಸ್ಪೆಷಲಿಸ್ಟ್.ಗಳು ಎಂದು ಹೇಳಬೇಕಾಗಿಲ್ಲ. ಇತರ ಖಾಸಗಿ ವ್ಯವಸ್ಥೆಯಿಂದ ನಿಯಮಗಳನ್ನು ಅನುಸರಿಸುವ ಅನೇಕಮಂದಿ ನಮ್ಮ ಸುತ್ತಮುತ್ತ ಇರುವ ಮಾರ್ಗವಿದೆ. ಈಗ ಪ್ರಸ್ತುತ ದೇವರು ತನ್ನ ಸೈನ್ಯದಲ್ಲಿ 5 ನಕ್ಷತ್ರಗಳನ್ನು ಪಡೆದಿರುವ ಜೆನೆರಲ್.ಗಳನ್ನೂ ಎದುರುನೋಡುತ್ತಿದ್ದಾನೆಂದು ನಾನು ನಂಬುತ್ತಿದ್ದೇನೆ. ಅವರಲ್ಲಿ ನಾನು ಕೂಡ ಸೇರುವುದಕ್ಕೆ ಇಷ್ಟಪಡುತ್ತಿದ್ದೇನೆ. ಇದಕ್ಕಾಗಿ ಹೋಗುವುದಕ್ಕೆ ಇದು ಅತ್ಯುತ್ಸಾಹದಿಂದಲು ಮತ್ತು ಅಹಂಕಾರದಿಂದಲೂ ಇರುತ್ತದೆಯೆಂದು ನನಗೆ ಗೊತ್ತು, ಆದರೆ ಯಾಕೆ ಹೋಗಬಾರದು?





ಪರಲೋಕದಲ್ಲಿರುವ ವಿಷಯಗಳ ಕುರಿತಾಗಿ ತವಕಪಡಬೇಕೆಂದು ದೇವರು ನಮಗೆ ಹೇಳಲಿಲ್ಲವೋ?

"ಮನುಷ್ಯರಿಗೋಸ್ಕರವಲ್ಲ, ಕರ್ತನಿಗೋಸ್ಕರ ಸೇವೆ ಮಾಡುತ್ತೇವೆಂದು ಚಿತ್ತಪೂರ್ವಕವಾಗಿ ಸೇವೆ ಮಾಡಿರಿ. ಯಾಕಂದರೆ ಒಬ್ಬನು ದಾಸನಾಗಲಿ ಸ್ವತಂತ್ರನಾಗಲಿ ತಾನು ಯಾವ ಸತ್ಕಾರ್ಯವನ್ನು ಮಾಡುತ್ತಾನೋ ಅದರ ಪ್ರತಿಫಲವನ್ನು ಕರ್ತನಿಂದ ಹೊಂದುವವೆಂಬದನ್ನು ನೀವು ತಿಳಿದವರಾಗಿಯೇ ಇದ್ದೀರಿ." - ಎಫೆಸ.6:7-8.



"ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತವಾಗಿ ಬರುವನು; ಅವಾಗ ಆತನು ಒಬ್ಬೊಬ್ಬನಿಗೆ ಅವನವನ ನಡೆತೆಗೆ ತಕ್ಕ ಫಲವನ್ನು ಕೊಡುವನು." - ಮತ್ತಾಯ.16:27.

ಯಥಾರ್ಥವಾಗಿ ಹೇಳುತ್ತಿದ್ದೇನೆ, ಜೆನೆರಲ್ ಆಗುವುದಕ್ಕೆ ನಾನು ಎಷ್ಟು ದೂರ ಹೋಗಬೇಕೆಂದು ನನಗೆ ಆಲೋಚನೆ ಇಲ್ಲ. ಆದರೆ ನಾನು ಎಲ್ಲಿದ್ದೇನೆ ಎನ್ನುವುದಕ್ಕೆ ಅತೀತವಾಗಿ ಇನ್ನೂ ಹೆಚ್ಚು ಇದೆಯೆಂದು ನನಗೆ ಗೊತ್ತು ಮತ್ತು ದೇವರಲ್ಲಿ ಮುಂದೆವರಿಯುವುದಕ್ಕೆ ನಾನು ಹೋಗುವೆನು ಮತ್ತು ನಾನು ಕಲಿತು, ಇನ್ನೂ ಹೆಚ್ಚಾಗಿ ಬೆಳೆಯುವುದಕ್ಕೆ ಮುಂದಕ್ಕೆ ಸಾಗುವೆನು. ನಿಸ್ಸಂಶಯವಾಗಿ, ನನಗೇನು ಗೊತ್ತಿಲ್ಲವೋ ಎನ್ನುವ ವಿವರಗಳನ್ನು ನಿಮ್ಮೊಂದಿಗೆ ನಾನು ಹಂಚಿಕೊಳ್ಳುವುದಿಲ್ಲ, ಆದರೆ ನಾನು ಕಲಿತುಕೊಂಡಿರುವ ಪಾಠಗಳನ್ನು ಮತ್ತು ಅನುಭವಗಳನ್ನು ಬರೆಯಬೇಕೆಂದು ದೇವರು ನನ್ನನ್ನು ಕೇಳಿದ್ದಾರೆ. ಮಕ್ಕಳ ಸೇವೆಯೆನ್ನುವುದು ಅಷ್ಟು ಸುಲಭವಾದ ಸೇವೆಯಲ್ಲ ಮತ್ತು ಖಂಡಿತವಾಗಿ ಬಲಹೀನವಾದದ್ದಲ್ಲ. ಮಕ್ಕಳ ಸೇವೆಗೆ ಅನೇಕಮಂದಿ ತೀವ್ರವುಳ್ಳ ಜೆನೆರಲ್ಸ್ ಬೇಕೇ ಬೇಕು, ಮತ್ತು ಅವರಲ್ಲಿ ನೀವೂ ಒಬ್ಬರಾಗಿರಬಹುದು.

ನಾನು ಸಮಸ್ಯೆಯನ್ನು ಇನ್ನೂ ಉತ್ತಮವಾಗಿ ಹೇಳುತ್ತೇನೆ.

ನಾನು ನನ್ನ ಕೈಯಲ್ಲಿ ಒಂದು ದೊಡ್ಡ ಮೀನನ್ನು ಹಿಡಿದುಕೊಂಡಿದ್ದೇನೆ, ಮತ್ತು ಒಬ್ಬ ಚಿಕ್ಕ ಮಗುವಿಗೆ ತನ್ನ ಬಹುಮಾನಕ್ಕಾಗಿ ವಂದನೆಗಳನ್ನು ಹೇಳಿದೆ. ಆ ಮೀನುನೊಂದಿಗೆ ಏನು ಮಾಡಬೇಕೆಂದು ನನಗೆ ಗೊತ್ತಾಗಲಿಲ್ಲ, ಆದ್ದರಿಂದ ಇದನ್ನು ಹಿಂದಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಇಡುವುದಕ್ಕೆ ನಾನು ಪ್ರಯತ್ನಪಟ್ಟೆನು, ಆದರೆ ನಾನು ಹೋಗುತ್ತಿರುವ ದಾರಿಯಲ್ಲಿ, ನಾನು ಸಮತೋಲನ ಮಾಡುವುದನ್ನು ಕಳೆದುಕೊಂಡು, ಹಿಂದಕ್ಕೆ ಬಿದ್ದು ಬಿಟ್ಟೆ. ಕೆಳಗಿರುವ ಮರಳಿನಲ್ಲಿ ನಾನು ಹೋಗಿ ಬಿದ್ದೆನು, ನಾನು ಅಲುಗಾಡಿತ್ತಿರುವ ಮೀನನ್ನು ಹಿಡಿದುಕೊಂಡು, ಚಾಚುವಷ್ಟರ ಮಟ್ಟಿಗೆ ಗಾಳಿಯೊಳಗೆ ನನ್ನ ಕೈಯನ್ನು ಚಾಚಿದೆ!

ಒಂದು ಚಿಕ್ಕ ಬೀಚ್ ಪಟ್ಟಣದಲ್ಲಿ ನಾವು ಸುವಾರ್ತೆಗಾಗಿ ಹೋಗಿದ್ದೆವು, ನನ್ನ ದೊಡ್ಡ ಅಕ್ಕ ಮತ್ತು ನಾನು ಮಕ್ಕಳ ಸೇವೆಯನ್ನು ಮಾಡುತ್ತಿದ್ದೆವು, ಆ ಸಮಯದಲ್ಲಿ ನನ್ನ ತಂದೆಯವರು ದೊಡ್ಡವರ ಸೇವೆಯನ್ನು ಮಾಡಲು ಹೋಗಿದ್ದರು. ನಾವು 25 ಮಂದಿ ಮಕ್ಕಳ ಜೊತೆಯಲ್ಲಿ ಹಾಡುಗಳನ್ನು ಹಾಡಿದೆವು, ಗೊಂಬೆಗಳನ್ನು ಕೊಟ್ಟೆವು ಮತ್ತು ಬೈಬಲ್ ಕಥೆಯನ್ನು ಹೇಳುವುದಕ್ಕೆ ಬಂದು ಬರಲಾರದ ಸ್ಪಾನಿಷ್ ಭಾಷೆಯಲ್ಲಿ ಹೇಳುವುದಕ್ಕೆ ಪ್ರಯತ್ನಪಟ್ಟೆವು. ಕೊನೆಯ ಭಾಗದಲ್ಲಿ, ಹೆಣ್ಣು ಮಕ್ಕಳಲ್ಲಿ ಒಬ್ಬರು ಬಹುಮಾನವಾಗಿ ನನಗೆ ಒಂದು ಮೀನನ್ನು ಕೊಟ್ಟರು.

"ನೀವು ಆ ಮಕ್ಕಳ ತಂದೆತಾಯಿಗಳಿಗೆ ನಿಜವಾಗಿ ಸೇವೆ ಮಾಡುತ್ತಿದ್ದರೆ, ಅವರ ಮಕ್ಕಳನ್ನು ಒಂದು ಅಥವಾ ಎರಡು ಗಂಟೆಗಳ ಸಮಯ ಒಂದು ಕಡೆಗೆ ತೆಗೆದುಕೊಂಡು ಹೋಗಿರಿ, ಅದರಿಂದ ಅವರು ಸುವಾರ್ತೆಯನ್ನು ಕೇಳುತ್ತಾರೆ" ಎಂದು ಅವರು ನನಗೆ ಹೇಳಿದರು.

ಕೆಲವೊಂದು ವರ್ಷಗಳಾದ ಮೇಲೆ, ಈ ಕಥೆಯನ್ನು ನಮ್ಮ ಸಭೆಯಲ್ಲಿನ ಮಕ್ಕಳ ಪಾಸ್ಟರ್ ಮತ್ತು ಪಾಸ್ಟರ್ ಗ್ಯಾರಿ ಡಕ್.ವರ್ತ್ ರವರ ಜೊತೆಯಲ್ಲಿ ಹಂಚಿಕೊಂಡಿದ್ದೇನೆ. ಅವರು ತನ್ನ ವ್ಯಾಖ್ಯೆಯೊಂದಿಗೆ ತುಂಬಾ ವಿಸ್ಮಯಪಟ್ಟರು! "ನೀವು ಹೊರ ಸುವಾರ್ತೆಗೆ ಹೋಗುವುದರ ಮೂಲಕ ಏನಾದರು ವ್ಯತ್ಯಾಸವನ್ನುಂಟು ಮಾಡಿದ್ದೀರೆಂದು ಆಲೋಚನೆ ಮಾಡುತ್ತಿದ್ದೀರೋ?" ಎಂದು ಅವರು ಕೇಳಿದರು. ಆಗ ನಾನು, ""ಹೌದು, ನಾವು ವ್ಯತ್ಯಾಸವನ್ನುಂಟು ಮಾಡಿದ್ದೇವೆ" ಎಂದು ನಾನು ಹೇಳಿದೆ. ಅವರು ನನ್ನೊಂದಿಗೆ ವಾದನೆಯನ್ನು ಮುಂದೆವರಿಸಿದರು, ನಿಜವಾಗಿ ನಾನು ಮಾಡಿದ್ದೆಲ್ಲಾ ಒಂದು ಸಾಯಂಕಾಲಕ್ಕಾಗಿ ಆ ಮಕ್ಕಳಿಗೆ ಕೊಟ್ಟ ವಸ್ತುಗಳು ಮಾತ್ರವೇ ಆಗಿತ್ತು. "ನೀವು ಆ ಮಕ್ಕಳ ತಂದೆತಾಯಿಗಳಿಗೆ ನಿಜವಾಗಿ ಸೇವೆ ಮಾಡುತ್ತಿದ್ದರೆ, ಅವರ ಮಕ್ಕಳನ್ನು ಒಂದು ಅಥವಾ

ಎರಡು ಗಂಟೆಗಳ ಸಮಯ ಒಂದು ಕಡೆಗೆ ತೆಗೆದುಕೊಂಡು ಹೋಗಿರಿ, ಅದರಿಂದ ಅವರು ಸುವಾರ್ತೆಯನ್ನು ಕೇಳುತ್ತಾರೆ" ಎಂದು ಅವರು ನನಗೆ ಹೇಳಿದರು.

ಆಗ ನಾನು ಕೋಪ ಮಾಡಿಕೊಂಡು, ಅವರು ನನಗೆ ಹೇಳಿದ ಮಾತುಗಳನ್ನು ಸ್ವೀಕರಿಸಲಿಲ್ಲ. ನಾನೀಗ ಮಕ್ಕಳ ಸೇವೆಯಲ್ಲಿದ್ದು ಸುಮಾರು 10 ವರ್ಷಗಳಾಯಿತು! ಮಕ್ಕಳ ಜೀವನಗಳಲ್ಲಿ ನಾನು ವ್ಯತ್ಯಾಸವನ್ನುಂಟು ಮಾಡುತ್ತಿದ್ದೇನೆಂದು ನನಗೆ ಗೊತ್ತು! ಅದೇ ದಿನದಂದು, ಗ್ಯಾರಿಯವರು ನನಗೆ ಹೇಳಿದ್ದನ್ನು ಕೇಳಿಸಿಕೊಂಡಿಲ್ಲ. ಅದು ನನಗೆ ಅರ್ಥವಾಗುವುದಕ್ಕೆ ತುಂಬಾ ಸಮಯ ತೆಗೆದುಕೊಂಡಿತ್ತು, ಆದರೆ ಒಂದು ದಿನ, ಎಷ್ಟೋ ದಿನಗಳಾದನಂತರ ಆತನ ಮಾತುಗಳು ಕೊನೆಗೆ ನನಗೆ ಅರ್ಥವಾದವು.



ಮೆಕ್ಸಿಕೋನಲ್ಲಿರುವ ಒಂದು ವಿಶೇಷವಾದ ಶಾಖೆಯಲ್ಲಿ ಒಂದು ದೊಡ್ಡ ವಿಭಾಗದಲ್ಲಿರುವ ಮಕ್ಕಳ ಸೇವೆಯ ನಿರ್ದೇಶಕರನ್ನು ಭೇಟಿಯಾಗಿದ್ದೆ. ಅವರ ಶಾಖೆಯಲ್ಲಿ ಹಮ್ಮಿ ಕೊಂಡಿರುವ ಒಂದು ಸಂದರ್ಭದ ಕುರಿತಾಗಿ ಆಕೆ ನನ್ನೊಂದಿಗೆ ಹಂಚಿಕೊಂಡಳು. ಆ ಸಂಸ್ಥೆಯಲ್ಲಿ ಅವರು ವಾರದ ಕೊನೆಯ ದಿನಗಳಲ್ಲಿ ನಡೆಯುವ ಮಕ್ಕಳ ಸೇವೆಗಾಗಿ ಬಾಧ್ಯರಾಗಿದ್ದರು. ಆ ಎಲ್ಲಾ ಕಾರ್ಯಕ್ರಮವನ್ನು ಅವರು ಹೇಗೆ ನಿರ್ವಹಿಸುತ್ತಾರೆಂದು ಮತ್ತು ಅದು ಯಾವ ಸಮಸ್ಯೆಗಳಿಲ್ಲದೆ ಹೇಗೆ ನಡೆಯಿತು ಎಂದು ತುಂಬಾ ವಿಜಯೋತ್ಸಾಹದಿಂದ ಅವರು ವಿವರಿಸಿದರು. ಆ ಕಾರ್ಯಕ್ರಮವನ್ನು ಮುಗಿಸುವುದಕ್ಕೆ ದೊಡ್ಡವರೊಂದಿಗೆ ಒಂದು ಅದ್ಭುತವಾದ ಸಂಗೀತ ಕಚೇರಿಯನ್ನು ನಿರ್ವಹಿಸಲು ಆಕೆ ಪ್ರಣಾಳಿಕೆ ಮಾಡಿದ್ದರು. ಸಂಗೀತ ಕಚೇರಿಯ ಅನೇಕ ವಿಧಗಳೊಂದಿಗೆ ಮಕ್ಕಳ ಜೊತೆಯಲ್ಲಿ ಅಭ್ಯಾಸ ಮಾಡಲು ವಾರದ ಕೊನೆಯ ದಿನಗಳಲ್ಲಿ ಸಮಯವನ್ನು ವೆಚ್ಚಗೊಳಿಸಿದರು.

ಆ ಕಾರ್ಯಕ್ರಮವು ಮುಗಿದನಂತರ, ಆ ಕಾರ್ಯಕ್ರಮವು ಚೆನ್ನಾಗಿ ನಡೆದಿದ್ದಕ್ಕಾಗಿ ತುಂಬಾ ಉನ್ನತ ಸ್ಥಾನದಲ್ಲಿರುವ ನಾಯಕರು ಆಕೆಯನ್ನು ಎಷ್ಟು ಹೆಚ್ಚಾಗಿ ಅಭಿನಂದನೆ ಮಾಡಿದ್ದರೆಂದು ಅವರು ಹಂಚಿಕೊಂಡರು. ಸಂಸ್ಥೆಯಲ್ಲಿ ಬರುವ ಮುಂದಿನ ಹೊಸ ಹೊಸ ದೊಡ್ಡ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ಆಕೆಯನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತೇನೆ ಎಂದು ಆತನು ಹೇಳಿದ್ದರೆಂದು ಅವರು ನನಗೆ ಹೇಳಿದರು!

ಆದರೆ ಆಕಸ್ಮಿಕವಾಗಿ, ಆಕೆಯೊಂದಿಗೆ ಮಾತನಾಡುತ್ತಿರುವಾಗ, ನಾನು ಎಷ್ಟೋ ವರ್ಷಗಳ ಹಿಂದೆ ಹೇಳಿದ ಪಾಸ್ಟರ್ ಗ್ಯಾರಿಯವರ ಮಾತುಗಳನ್ನು ನಾನು ನೆನಸಿಕೊಂಡೆನು. ನಾನು ಕೊನೆಗೆ ಅರ್ಥಮಾಡಿಕೊಂಡಿದ್ದೇನೆ. ನನ್ನ ಜೊತೆಯಲ್ಲಿರುವ ಸ್ನೇಹಿತನು ವಾರದ ಕೊನೆಯ ದಿನಗಳೆಲ್ಲಾ ಆ ಮಕ್ಕಳೊಂದಿಗೆ ದೊಡ್ಡವರನ್ನು ಮನೋರಂಜನೆ ಮಾಡಲು ಉಪಯೋಗಿಸಿಕೊಂಡಿದ್ದಾನೆ! ವಿದ್ಯಾರ್ಥಿಗಳು ನೆಟ್ಟಗೆ ಹೇಗೆ ನಿಲ್ಲಬೇಕು, ಹೇಗೆ ಚೆನ್ನಾಗಿ ಹಾಡಬೇಕು ಎನ್ನುವ ವಿಷಯಗಳನ್ನು ಹೊರತುಪಡಿಸಿ ಹೊಸ ಸಂಗತಿಗಳನ್ನು ಯಾವುವು ಕಲಿತುಕೊಂಡಿರಲಿಲ್ಲ, ಇವೆಲ್ಲವುಗಳನ್ನು ಅವರು ತಮ್ಮ ತಮ್ಮ ಶಾಲೆಗಳಲ್ಲಿ ಚೆನ್ನಾಗಿ ಕಲಿತುಕೊಂಡಿದ್ದರು!

ಗ್ಯಾರಿಯವರು ನನಗೆ ಹೇಳಿದ್ದನ್ನು ಆಕೆಗೆ ಹೇಳುವುದಕ್ಕೆ ನನಗೆ ಮನಸ್ಸಿದ್ದಿಲ್ಲ. ನನ್ನ ಕಣ್ಣುಗಳಲ್ಲಿ ಕಣ್ಣೀರು ಕುಟಿಕಿದವು.ಅವರು ಹೇಳಿದ್ದೇ ಸರಿ. ನಿಜವಾದ ಮಕ್ಕಳ ಸೇವೆ ಏನೆಂದರೆ ಮಕ್ಕಳನ್ನು ಮನೋರಂಜನೆ ಮಾಡುವುದಲ್ಲ. ಆದರಿಂದ ದೊಡ್ಡವರು ಅಡಚಣೆಗಳಿಲ್ಲದೆ ಸಬೆಗಳಿಗೆ ಹೋಗುತ್ತಾರೆ. ಇಲ್ಲಂದರೆ, ಅವರನ್ನು ಒಂದು ಒಳ್ಳೇಯ ಸಂಗೀತದ ಕಚೇರಿಯಲ್ಲಿರಿಸಬಹುದು. ಇದರಿಂದ ದೊಡ್ಡವರು ಇನ್ನೂ ಹೆಚ್ಚಾಗಿ ಮನೋರಂಜನೆಗೆ ಗುರಿಯಾಗುವರು. ಮಕ್ಕಳನ್ನು ಗೊಂಬೆಗಳಾಗಿ ಉಪಯೋಗಿಸಿ, ದೊಡ್ಡವರಿಗೆ ಸೇವೆ ಮಾಡುವುದು ಅಂದರೆ ಅದೇ. ನಾವು ನಿಜವಾಗಿ ಯುದ್ಧದಲ್ಲಿದ್ದರೆ, ಸಂಗೀತ ಕಚೇರಿ ಅದನ್ನು ಬೇರ್ಪಡಿಸುವುದಿಲ್ಲ. ಆ ಮಕ್ಕಳೆಲ್ಲರು ವಾರದ ಕೊನೆಯ ದಿನಗಳಲ್ಲಿ ಪ್ರಾರ್ಥನೆ ಹೇಗೆ ಮಾಡುವುದೆಂದು ಕಲಿತುಕೊಳ್ಳಬಹುದು! ಅಥವಾ ಸಭೆ ಮತ್ತು ಕ್ರೈಸ್ತವ್ಯದ ಕುರಿತಾಗಿ ಅವರು ಸತ್ಯಗಳನ್ನು ತಿಳಿದುಕೊಳ್ಳಬಹುದು. ಅವರಿಗೆ ಕೂಡ ಸೇವೆ ಮಾಡಬಹುದು. ನಾವು ನಿಜವಾಗಿ ಯುದ್ಧದಲ್ಲಿದ್ದರೆ, ಪುಟಗಳಿಗೆ ಬಣ್ಣಗಳನ್ನು ಹಚ್ಚುವುದು ಮತ್ತು ನಿಜವಾದ "ಸಭೆಯ" ಉತ್ತರಗಳನ್ನು ಕಂಠಪಾಠ ಮಾಡುವುದು ಅದನ್ನು ಕತ್ತರಿಸಬಾರದು. ನಾವು ಯುದ್ಧದಲ್ಲಿದ್ದೇವೆ ಮತ್ತು ನಾವು ಅದನ್ನು ಮರೆಯಬಾರದು.

ನಾವು ನಿಜವಾಗಿ ಯುದ್ಧದಲ್ಲಿದ್ದರೆ, ಪುಟಗಳಿಗೆ ಬಣ್ಣಗಳನ್ನು ಹಚ್ಚುವುದು ಮತ್ತು ನಿಜವಾದ "ಸಭೆಯ" ಉತ್ತರಗಳನ್ನು ಕಂಠಪಾಠ ಮಾಡುವುದು ಅದನ್ನು ಕತ್ತರಿಸಬಾರದು. ನಾವು ಯುದ್ಧದಲ್ಲಿದ್ದೇವೆ ಮತ್ತು ನಾವು ಅದನ್ನು ಮರೆಯಬಾರದು.

ಈ ಪ್ರಪಂಚಕ್ಕೆ ನಾನು ಎಷ್ಟು ಪುಸ್ತಕಗಳನ್ನು ಕೊಟ್ಟಿದ್ದೇನೆನ್ನುವುದು ಪ್ರಾಮುಖ್ಯವಲ್ಲ, ದೇವರು ಬಯಸಿದ್ದನ್ನು ನನ್ನ ಅಂತರಂಗದಲ್ಲಿ ಇಟ್ಟುಕೊಳ್ಳದಿದ್ದರೆ, ಆತನು ಬಯಸುವ ರೀತಿಯಲ್ಲಿ ನನ್ನನ್ನು ಯುದ್ಧದಲ್ಲಿ ಉಪಯೋಗಿಸಿಕೊಳ್ಳುವುದಿಲ್ಲ.

ನಮ್ಮ ನಂಬಿಕೆಯಲ್ಲಿ ನಾವು ಬೆಳೆಯುತ್ತಿದ್ದಂತೆ ನಾವೆಲ್ಲರು ಏರುವುದಕ್ಕೆ ಒಂದು ಏಣಿ ಇದೆ. ಕ್ರೈಸ್ತವ್ಯದ ಸಾಧಾರಣವಾದ ಮಾರ್ಗದಲ್ಲಿ ಪ್ರತಿಯೊಬ್ಬರು ಏರುವ ಏಣಿ ಇದಲ್ಲ. ದೇವರಿಗೆ ಒಂದು ವಿಶೇಷವಾದ ಏಣಿ ಇದೆ!

ಮಕ್ಕಳ ಸೇವೆಯಲ್ಲಿ ಏಣಿಯನ್ನು ಏರುವುದು ಪ್ರಾರಂಭಿಸಿದರೆ, ಅದರಿಂದ ಯೌವನಸ್ಥರ ಪಾಸ್ಟರಾಗುವುದಕ್ಕೆ ಬೆಳೆಸುವುದು, ಅದಾದನಂತರ ಪಾಸ್ಟರ್ ರವರಿಗೆ ಸಹಾಯಕರಾಗಿ ಬೆಳೆಯಬೇಕು, ಅದಾದನಂತರ ಕೊನೆಗೆ ಸಭೆಗೆ ಮುಖ್ಯ ಪಾಸ್ಟರಾಗಿ ಮಾರ್ಪಡಿಸುವ ಒಂದು ವಿಶೇಷವಾದ ಏಣಿಯನ್ನು ನಾವು ಏರುತ್ತಿದ್ದೇವೆ. ಅದು ಕ್ರೈಸ್ತವ್ಯ ಪ್ರಪಂಚದಲ್ಲಿ ಪ್ರಸಿದ್ಧಿ ಹೊಂದಿದ ಏಣಿಯಂತೆ ಅದಿರುತ್ತದೆ.

ವಿಬಿಎಸ್ ಎಂದು ಬರೆಯುವುದಕ್ಕೆ ನಾನು ಕೆಲವೊಂದು ಪುಟಗಳಿಗೆ ಬಣ್ಣಗಳನ್ನು ಹಾಕುವದರಿಂದ ಸಂಪೂರ್ಣ ಸಂಡೇ ಸ್ಕೂಲ್ ಪಠ್ಯಕ್ರಮವನ್ನು ಬರೆಯುವ ಮಟ್ಟಕ್ಕೆ ಬಂದಿದ್ದೇನೆ. ಸಂಡೇ ಸ್ಕೂಲ್ ಪುಸ್ತಕಗಳನ್ನು 30 ಸಭೆಗಳಿಗೆ ಹಂಚುವದರಿಂದ ಸಾವಿರಾರು ಸಭೆಗಳಿಗೆ ಹಂಚುವುದರ ಮಟ್ಟಕ್ಕೆ ಬಂದಿದ್ದೇನೆ. ಇದೇ ಕ್ರೈಸ್ತವ್ಯದಲ್ಲಿ ಪ್ರಸಿದ್ಧಿ ಹೊಂದಿದ ಏಣಿ. ದೇವರು ಅಂತರಂಗದಲ್ಲಿರುವ ಮನುಷ್ಯನನ್ನು ನೋಡುತ್ತಿದ್ದಾನೆ ಹೊರತು ಬಹಿರಂಗ ಮನುಷ್ಯನನ್ನು ನೋಡುತ್ತಿಲ್ಲವೆಂದು ವಾಕ್ಯದಲ್ಲಿ ದೇವರು ಅನೇಕಬಾರಿ ನಮಗೆ ಹೇಳುತ್ತಿದೆ. ಈ ಪ್ರಪಂಚಕ್ಕೆ ನಾನು ಎಷ್ಟು ಪುಸ್ತಕಗಳನ್ನು ಕೊಟ್ಟಿದ್ದೇನೆನ್ನುವುದು ಪ್ರಾಮುಖ್ಯವಲ್ಲ, ದೇವರು ಬಯಸಿದ್ದನ್ನು ನನ್ನ ಅಂತರಂಗದಲ್ಲಿ ಇಟ್ಟುಕೊಳ್ಳದಿದ್ದರೆ, ಆತನು ಬಯಸುವ ರೀತಿಯಲ್ಲಿ ನನ್ನನ್ನು ಯುದ್ಧದಲ್ಲಿ ಉಪಯೋಗಿಸಿಕೊಳ್ಳುವುದಿಲ್ಲ. ನಾನು ದೇವರ ಸೈನ್ಯದಲ್ಲಿ ಒಬ್ಬ ಜೆನೆರಲ್ ಆಗುವುದಕ್ಕೆ ತವಕಪಡದಿದ್ದರೆ, ಲಂಚದ ರೂಪದಲ್ಲಿ ನನಗೆ ಬಂದಿರುವ ಖ್ಯಾತಿಯನ್ನು ದೇವರಿಗೆ ಕೊಡುವುದಿಲ್ಲ. ನನ್ನ ಅಂತರಂಗದಲ್ಲಿ ನಾನು ಏನಾಗಿದ್ದೀನೆಂದು ದೇವರಿಗೆ ಚೆನ್ನಾಗಿ ಗೊತ್ತು. ದೇವರ ಸೈನ್ಯದಲ್ಲಿ ನಿಮಗೆ ದೊಡ್ಡ ಪದವಿ ಬೇಕೆಂದಿದ್ದರೆ ಏರುವುದಕ್ಕೆ ಅದೇ ನಿಜವಾದ ಏಣಿಯಾಗಿರುತ್ತದೆ. ನಿತ್ಯತ್ವಕ್ಕಾಗಿ ನೀವು ವ್ಯತ್ಯಾಸವನ್ನುಂಟು ಮಾಡಬೇಕೆಂದು ಬಯಸಿದರೆ, ಏರುವುದಕ್ಕೆ ಇದೇ ನಿಜವಾದ ಏಣಿಯಾಗಿದೆ!

ಈ ಏಣಿಯಲ್ಲಿ ಕಣ್ಣು ನೋಡುವ ದೂರದ ವರೆಗೂ ಅನೇಕ ಟನ್ನುಗಳ ಏರುವ ಮೆಟ್ಟಿಲುಗಳನ್ನು ಒಳಗೊಂಡಿರುತ್ತದೆ. ಈ ಏಣಿಯ ಮೇಲೆ ಇರುವ ಮೆಟ್ಟಿಲುಗಳೆಲ್ಲವು ನಮ್ಮ ಅಂತರಂಗಕ್ಕೆ ಸಂಬಂಧಪಟ್ಟವುಗಳು ಮತ್ತು ದೇವರೊಂದಿಗೆ ನಮಗಿರುವ ಸಂಬಂಧಗಳು. ಸಭೆಯಲ್ಲಾಗಲಿ ಅಥವಾ ಸಮಾಜದಲ್ಲಾಗಲಿ ನಮ್ಮ ಬಹಿರಂಗ ರೂಪದೊಂದಿಗೆ ಅವುಗಳು ಏನೂ ಮಾಡುವುದಕ್ಕಾಗುವುದಿಲ್ಲ. ನನ್ನ ಉದ್ಯೋಗದೊಂದಿಗೆ, ನನ್ನ ಆರ್ಥಿಕ ಸ್ಥಿತಿದೊಂದಿಗೆ ನಾನಿರುವ ಅದ್ಭುತವಾದ ಸೇವೆಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ.

"ಆದರೆ ಯೆಹೋವನು ಸಮುವೇಲನಿಗೆ - ನೀನು ಅವನ ಚೆಲುವಿಕೆಯನ್ನೂ ನೀಳವನ್ನೂ ನೋಡಬೇಡ; ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ ಅಂದನು." - 1 ಸಮು.16:7.

ಈ ದಿನದಂದು ಅನೇಕಮಂದಿ ಕ್ರೈಸ್ತರು ಯೇಸುವಿನ ಕಾಲದಲ್ಲಿ ಇದ್ದಂತೆ ಸುಳ್ಳಾದ, ತಪ್ಪಾದ ಏಣಿಯನ್ನು ಏರುತ್ತಿದ್ದಾರೆ, ಅಂಥವರಿಗೆ "ಅವರ ಮಾತನ್ನು ಬಿಡಿರಿ; ತಾವೇ ಕುರುಡರು, ಮತ್ತೊಬ್ಬರಿಗೆ ದಾರಿ ತೋರಿಸುವುದಕ್ಕೆ ಹೋಗುತ್ತಾರೆ; ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು" - ಮತ್ತಾಯ.15:14. ಎಂದು ದೇವರ ಆಜ್ಞೆಗಳಿವೆ. ಜನರಿಗೆ ಅವರವರ ಧರ್ಮದ ನಿಯಮಗಳಿರುತ್ತವೆ, ಮೊಟ್ಟ ಮೊದಲು ತಮ್ಮ ಕೈಗಳನ್ನು ತೊಳೆದುಕೊಳ್ಳದೇ ಊಟ ತಿನ್ನಬಾರದೆನ್ನುವು ಅದರಲ್ಲಿರುವ ಒಂದು ನಿಯಮ. ಆದರೆ ಅವರು ಇನ್ನೂ ತಮ್ಮ ಹೃದಯಗಳಲ್ಲಿ ಪಾಪ ಮಾಡುತ್ತಾ ಇದ್ದಾರೆ. ಅಂಥವರಿಗೆ ಯೇಸು ಹೇಳುವುದೇನೆಂದರೆ;



"ಆದರೆ ಬಾಯೊಳಗಿಂದ ಹೊರಡುವಂಥವುಗಳು ಮನಸ್ಸಿನೊಳಗಿಂದ ಬರುತ್ತವೆ; ಇವೇ ಮನುಷ್ಯನನ್ನು ಹೊಲೆ ಮಾಡುವವು. ಹೇಗಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ ಕೊಲೆ ಹಾದರ ಸೂಳೆಗಾರಿಕೆ ಕಳ್ಳತನ ಸುಳ್ಳು ಸಾಕ್ಷಿ ಬೈಗಳು ಹೊರಟು ಬರುತ್ತವೆ. " - ಮತ್ತಾಯ.15:18-20.

ಯೇಸುವಿನ ಕಾಲದಲ್ಲಿ ಅವರಿಗಿರುವ ನಿಯಮಗಳಂಥೆ, ಇವತ್ತು ಇದು ನಮ್ಮ ಎಲ್ಲಾ ನಿಯಮಗಳಿಗೆ ಅನ್ವಯಿಸಲ್ಪಡುತ್ತದೆ, ಈ ದಿನದಂದು ಸಭೆಯಲ್ಲಿ, ಕೈಗಳನ್ನು ತೊಳೆದುಕೊಳ್ಳದೇ ತಿನ್ನಬಾರದೆನ್ನುವ ಧಾರ್ಮಿಕ ನಿಯಮವು ನಮಗಿಲ್ಲ. ಇದು ಆರೋಗ್ಯಕ್ಕೆ ಒಳ್ಳೇಯ ನಿಯಮವೆಂದು ನಮ್ಮೆಲ್ಲರಿಗೆ ಚೆನ್ನಾಗಿ ಗೊತ್ತು, ಆದರೆ ಅದು ಎಂದಿಗೂ ಸಭೆಯ ನಿಯಮವಾಗುವುದಕ್ಕೆ ಸಾಧ್ಯವಿಲ್ಲ. ಆದರೆ ನಮ್ಮ ಸಭೆಗಳಲ್ಲಿ ಅನೇಕವಾದ ನಿಯಮಗಳು ನಮಗಿಲ್ಲ. ನಮ್ಮ ಹೃದಯದೊಳಗಿಂದ ಬರುವವುಗಳೊಂದಿಗೆ ಆ ನಿಯಮಗಳಲ್ಲಿ ಯಾವುದನ್ನೂ ಹೋಲಿಸುವುದಕ್ಕಾಗುವುದಿಲ್ಲ.



ನಾನು ಮಾತನಾಡುತ್ತಿರುವ ಅಂತಃರಂಗದ ಏಣಿಯ ಕುರಿತಾಗಿ ದೇವರು ಹೆಚ್ಚಾಗಿ ನೋಡುತ್ತಾರೆ. ಅದನ್ನು ನಿರೂಪಿಸುವುದಕ್ಕೆ ಬೈಬಲ್. ನಲ್ಲಿ ಅನೇಕವಾದ ವಚನಗಳಿವೆ. "ಆ ಅಸ್ತಿವಾರದ ಮೇಲೆ ಮೇಲೆ ಚಿನ್ನ ಬೆಳ್ಳಿ ರತ್ನ ಕಟ್ಟಿಗೆ ಹುಲ್ಲು ಆಪು ಮುಂತಾದವುಗಳಲ್ಲಿ ಯಾವದರಿಂದ ಕಟ್ಟಿದರೂ ಅವನವನ ಕೆಲಸವು ವ್ಯಕ್ತವಾಗುವದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವದು; ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವುದು. ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳಬರುವುದು. ಒಬ್ಬನು ಕಟ್ಟಿದ್ದು ಸುಟ್ಟು ಹೋದರೆ ಅವನಿಗೆ ಸಂಬಳವು ನಷ್ಟವಾಗುವುದು; ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು." 1 ಕೊರಿಂಥ.3:12-15.

ಈ ಏಣಿಯನ್ನೇ ನಮ್ಮ ಮಕ್ಕಳು ಏರಬೇಕೆಂದು ಅವರಿಗೆ ನಾವು ಬೋಧಿಸಬೇಕು. ನಮ್ಮ ಸಭೆಯೊಳಗೆ ಆಗಾಗ್ಗೆ ಬರುವ ರಾಜಕೀಯ ಅವ್ಯವಸ್ಥೆಯಂತೆ ಇರುತ್ತದೆ. ನಾವು ಮಕ್ಕಳಿಗೆ ಮಾಡುವ ಸೇವಕರಿಂದ ಯೌವನಸ್ಥರಿಗೆ ಮಾಡುವ ಸೇವಕರಾಗಿ ಏರಬೇಕು. ಕೊನೆಗೆ ಅನುಭವವುಳ್ಳ ಪಾಸ್ಟರಾಗಬೇಕು. ಇವಾಗ ಅದನ್ನು ಮಾತ್ರವೇ ಹಿಡಿದುಕೊಳ್ಳಬೇಕು. ಲೋಕದ ಏಣಿ ಮತ್ತು ಸಭೆಯ ಏಣಿಗಳಲ್ಲದೆ, ದೇವರ ಅಂತಃರಂಗದ ಏಣಿಯೊಂದಿಗೆ, ನೀವು ಯಾವುದನ್ನೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. 1ನೇ ಹಂತದಿಂದ 8ನೇ ಹಂತದವರೆಗೆ ಯಾವ ಬಲೆಯ ಬಾಗಿಲು ಇರುವುದಿಲ್ಲ. ದೇವರ ಏಣಿಯನ್ನು ಏರುವುದಕ್ಕೆ ಕೆಲಸ ಮಾಡುವ ಶ್ರೀಮಂತಿಕೆಯ ಶೀಘ್ರವಾದ ಒಳ್ಳೇಯ ಯೋಜನೆಗಳು ಯಾವುವು ಇಲ್ಲ. ಪ್ರಪಂಚದ ಏಣಿಯನ್ನು ತುಂಬಾ ಶೀಘ್ರವಾಗಿ ಏರುವುದಕ್ಕೆ ಅಂತರಿಕ ವ್ಯಾಪಾರವನ್ನು ಉಪಯೋಗಿಸುವ, ವಾಲ್ ಸ್ಟ್ರೀಟ್ ಮೂವೀಸ್ ಕಾಣಿಸಿಕೊಳ್ಳುವ ಗೊರ್ಡನ್ ಗೆಕ್ಕೋ ಅವರಂಥೆಯೇ. ಆತ್ಮೀಯಕ ಪ್ರಪಂಚದಲ್ಲಿ ಮುಂದಕ್ಕೆ ತೆರಳಿ ಹೋಗುವುದಕ್ಕೆ ಪ್ರಯತ್ನಿಸಿದರೆ, ಕೊನೆಗೆ ನಿಮ್ಮ ಮುಖದ ಮೇಲೆ ಧೂಳಿಯನ್ನು ಮಾತ್ರ ಕಂಡುಕೊಳ್ಳುವಿರಿ. ಇದು ತುಂಬಾ ಮೆಲ್ಲಗೆ ಹೋಗುವ ವಿಧಾನವಾಗಿರುತ್ತದೆ ಮತ್ತು ಅದು ಅನೇಕ ವರ್ಷಗಳು ಹಿಡಿಯುತ್ತದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲಿರುವಾಗ ಅವರೊಂದಿಗೆ ಆರಂಭಿಸುವುದಕ್ಕೆ ಇದು ತುಂಬಾ ಪ್ರಾಮುಖ್ಯವೆಂದು ಹೇಳುವುದಕ್ಕೆ ಇದೇ ಒಂದು ಕಾರಣವಾಗಿರುತ್ತದೆ. ಮೊದಲು ಪ್ರಾರಂಭದಲ್ಲಿ ಚೆಂಡು ಉರುಳಿಸುವುದು ತುಂಬಾ ಪ್ರಾಮುಖ್ಯ. ಅದು ಕೂಡ ಸರಿಯಾದ ಏಣಿಯ ಮೇಲೆ ಆಡಿಸಬೇಕು!

ಸರಿ, ಇಲ್ಲಿ ನಿಮಗಾಗಿ ಒಂದು ಯಥಾರ್ಥವಾದ ಸತ್ಯವಿದೆ :

ಪ್ರತಿಯೊಬ್ಬರೂ ತಪ್ಪಾದ ಏಣಿಯನ್ನೇ ಏರುತ್ತಿದ್ದಾರೆ.

ಅವರು ಹಣವನ್ನು, ಖ್ಯಾತಿಯನ್ನು ಮತ್ತು ಅದೃಷ್ಟವನ್ನು ಗಳಿಸುವುದಕ್ಕೆ ಲೋಕದ ಏಣಿಯನ್ನು ಏರುತ್ತಾರೆ; ಇಲ್ಲದಿದ್ದರೆ, ಹಣವನ್ನು, ಖ್ಯಾತಿಯನ್ನು ಮತ್ತು ಅದೃಷ್ಟವನ್ನು ಗಳಿಸುವುದಕ್ಕೆ ಕ್ರೈಸ್ತವ್ಯದ ಏಣಿಯನ್ನಾಗಲಿ ಏರುತ್ತಾರೆ. ಹಣವನ್ನು, ಖ್ಯಾತಿಯನ್ನು ಮತ್ತು ಅದೃಷ್ಟವನ್ನು ಗಳಿಸುವುದಕ್ಕೆ ದೇವರ ಏಣಿಯನ್ನು ಏರುವುದಕ್ಕೆ ನಿಮ್ಮ ಕಣ್ಣುಗಳನ್ನು ತೆರೆಯುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ! (ನಿತ್ಯತ್ವಕ್ಕಾಗಿ ಕೆಲಸಮಾಡುತ್ತಿರುವಾಗ; ಪಾವತಿಸುವ ಪ್ರಣಾಳಿಕೆ ಆಲಸ್ಯವಾಗಿರುತ್ತದೆ.) ದೇವರ ಏಣಿ ಎನ್ನುವುದು ದೇವರ ಗುಣಲಕ್ಷಣಗಳು, ವಿಧೇಯತೆ, ನಂಬಿಕೆ, ಯಥಾರ್ಥತೆ ಮತ್ತು ಆತನಿಗೆ ಸಂಪೂರ್ಣವಾಗಿ ಸೇವೆ ಮಾಡುವುದನ್ನು ಕಲಿತುಕೊಳ್ಳುವಿಕೆಗಾಗಿ ಕುರಿತಾಗಿ ಇರುತ್ತದೆ. ಇದು ನಿಮ್ಮ ಜೀವನದಲ್ಲಿ ಆತ್ಮ ಫಲದೊಂದಿಗೆ

ನಿಮ್ಮ ಜೀವನದಲ್ಲಿ ಎಲ್ಲಾ ನಿರ್ಣಯಗಳನ್ನು ದೇವರೇ ಮಾಡುತ್ತಾರೆಂದು ಇದರ ಅರ್ಥವಾಗಿರುತ್ತದೆ. ನಿಮ್ಮೊಂದಿಗೆ ಯಥಾರ್ಥವಾಗಿ ಹೇಳಬೇಕೆಂದರೆ, ಕ್ರೈಸ್ತವ ಜೀವನವು ಬೇರೊಂದು ವಿಧಾನದಲ್ಲಿ ಜೀವಿಸುವುದೆಂದು ನಾನು ಆಲೋಚನೆ ಮಾಡುತ್ತಿಲ್ಲ.

ಜೀವಿಸುವುದರ ಕುರಿತಾಗಿ ಇರುತ್ತದೆ. ದೇವರ ಏಣಿ ಎಂದರೆ ನಿಮ್ಮ ಜೀವನವನ್ನು ಆತನು ಪಾಲಿಸುವುದಾಗಿರುತ್ತದೆ ಮತ್ತು ಅವರನ್ನು ಹಿಂದಿರುಗಿಸಬಾರದು. ನಿಮ್ಮ ಜೀವನದಲ್ಲಿ ಎಲ್ಲಾ ನಿರ್ಣಯಗಳನ್ನು ದೇವರೇ ಮಾಡುತ್ತಾರೆಂದು ಇದರ ಅರ್ಥವಾಗಿರುತ್ತದೆ.



ನಿಮ್ಮೊಂದಿಗೆ ಯಥಾರ್ಥವಾಗಿ ಹೇಳಬೇಕೆಂದರೆ, ಕ್ರೈಸ್ತವ ಜೀವನವು ಬೇರೊಂದು ವಿಧಾನದಲ್ಲಿ ಜೀವಿಸುವುದೆಂದು ನಾನು ಆಲೋಚನೆ ಮಾಡುತ್ತಿಲ್ಲ.

ಆದರೆ, ನಮ್ಮ ಸುತ್ತಮುತ್ತಲಿರುವ ಕ್ರೈಸ್ತರು ಇದನ್ನೇ ಮಾಡುತ್ತಿದ್ದಾರೆ.

ಜಗತ್ತಿನಲ್ಲಿರುವ ಸಾವಿರಾರು ಕ್ರೈಸ್ತರು ಲೋಕದಲ್ಲಿ ಖ್ಯಾತಿಯನ್ನು ಪಡೆಯುವುದಕ್ಕೆ ಜೀವನ ಮಾಡುತ್ತಿರುವುದನ್ನು ಅಥವಾ ಸಂಸ್ಥೆಯ ಏಣಿಯನ್ನು ಏರುವುದನ್ನು ನಾನು ನೋಡುತ್ತಿದ್ದೇನೆ, ಅವರ ಅಂತಃರಂಗವು ಚಿಕ್ಕ ಮಕ್ಕಳ ಕೂಸುಗಳಂತೆ ಇರುವುದಕ್ಕೆ ಅನುಮತಿಸುತ್ತಾರೆ. ಅದನ್ನು ನಾನು ಹೊಂದಿಕೊಳ್ಳಲಿಲ್ಲ. ಅವರು ತಮ್ಮ ದೇವರನ್ನು ನಕಲಿ ದೇವರನ್ನಾಗಿ ಮಾಡುತ್ತಿದ್ದಾರೆಂದು ಅವರು ಆಲೋಚನೆ ಮಾಡುವರೋ?

ಸರಿಯಾದ ಏಣಿಯ ಮೇಲೆ ಮಕ್ಕಳನ್ನು ಏರಿಸುವುದಕ್ಕೆ ನೀವು ಮತ್ತು ನಾನು ಬೆರೆತು ಕೆಲಸ ಮಾಡಬೇಕು, ಅವರು ಚಿಕ್ಕವರಾಗಿ ಇರುವಾಗಲೇ ಆರಂಬಿಸಬೇಕು. ಇದರಿಂದ ದೇವರಿಗಾಗಿ ಅನೇಕಮಂದಿ ಸೈನಿಕರನ್ನು ತಯಾರಿಸಬಹುದು ಮತ್ತು ದೇವರು ಅವರನ್ನು ಆತನಿಗೆ ಬೇಕಾದ ಉಪಯೋಗಿಸಿಕೊಳ್ಳಬಹುದು!

ಎಲ್ಲಾ ಮಟ್ಟಗಳಲ್ಲಿರುವ ಜನರು ಬೇಕಾಗಿದ್ದಾರೆ, ಏಣಿಯ ಮೇಲೆ ಎಲ್ಲಾ ಮೆಟ್ಟಿಲುಗಳು ನಮಗೆ ಅವಶ್ಯಕವಾಗಿವೆ ಎನ್ನುವುದು ನಿಜ. ನಾವೆಲ್ಲರು ಏಣಿಯನ್ನು ಏರುವುದಕ್ಕೆ ಪ್ರಾರಂಭಿಸುವುದೆ ಮಾಡುವುದಕ್ಕೆ ಅತ್ಯುತ್ತಮ ವಿಧಾನ.

1. ನೀವು ಮತ್ತು ನಾನು ಎಲ್ಲಾ ಸಮಯಗಳಲ್ಲಿ ಏರುತ್ತಿರಬೇಕಾದ ಅವಶ್ಯಕತೆಯಿದೆ. ನಿಮ್ಮ ಸೇವೆಯಲ್ಲಿ ಮಕ್ಕಳಿಗೆ ಮಾದರಿಯಾಗಿರಿ. ನಿಮ್ಮ ಮಾತುಗಳಿಗಿಂತ ನಿಮ್ಮ ಕ್ರಿಯೆಗಳೇ ಹೆಚ್ಚಾಗಿ ಮಾತನಾಡುತ್ತವೆ.

2. ನಿಮ್ಮ ವಿದ್ಯಾರ್ಥಿಗಳೊಂದಿಗೆ ಯಥಾರ್ಥವಾಗಿರ್ರಿ. ಅವರಿಗೆ ಎರಡು ಏಣಿಗಳನ್ನು ತೋರಿಸಿರಿ ಮತ್ತು ಏರುವುದಕ್ಕೆ ಯಾವ ಏಣಿ ಉತ್ತಮವಾದದ್ದೋ ಎಂದು ಅವರಿಗೆ ಅರ್ಥವಾಗುವಂತೆ ಹೇಳಿರಿ.

3. ಏರುವುದು ಹೇಗೆಂದು ನಮ್ಮ ಸೇವೆಗಳಲ್ಲಿ ಮಕ್ಕಳಿಗೆ ತರಬೇತಿಯನ್ನು ಕೊಡಿರಿ. ಅನೇಕ ವಿಷಯಗಳಲ್ಲಿ, ಅವರು ತಮಷ್ಟಕ್ಕೆ ತಾವು ಇದನ್ನು ಲೆಕ್ಕಾಚಾರ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರು ವಚನಗಳನ್ನು ಕಂಠಪಾಠ ಮಾಡಿ, ಅದರ ಪ್ರಕಾರ ಜೀವಿಸದಿರುವ ಪದ್ಧತಿ ನಿಮ್ಮಲ್ಲಿ ಇರಬಾರದೆಂದು ನೀವು ಉಪಾಧ್ಯಾಯರಾಗಿರುವ ನೀವು ಖಚಿತಪಡಿಸಿಕೊಳ್ಳಬೇಕು.

ಸರಿಯಾದ ಏಣಿಯ ಮೇಲೆ ಮಕ್ಕಳನ್ನು ಏರಿಸುವುದಕ್ಕೆ ನೀವು ಮತ್ತು ನಾನು ಬೆರೆತು ಕೆಲಸ ಮಾಡಬೇಕು, ಅವರು ಚಿಕ್ಕವರಾಗಿ ಇರುವಾಗಲೇ ಆರಂಬಿಸಬೇಕು. ಇದರಿಂದ ದೇವರಿಗಾಗಿ ಅನೇಕಮಂದಿ ಸೈನಿಕರನ್ನು ತಯಾರಿಸಬಹುದು ಮತ್ತು ದೇವರು ಅವರನ್ನು ಆತನಿಗೆ ಬೇಕಾದ ಉಪಯೋಗಿಸಿಕೊಳ್ಳಬಹುದು!

ಏಣಿಯನ್ನು ಏರುವುದಕ್ಕೆ ಇದು ತುಂಬಾ ಪ್ರಾಮುಖ್ಯವಾದದ್ದು, ಮೊಟ್ಟಮೊದಲು ನಾವು ಸರಿಯಾದ ಏಣಿಯ ಮೇಲೆ ನಾವಿದ್ದೀವೋ ಇಲ್ಲವೋ ಎಂದು ನಾವು ತಿಳಿದುಕೊಳ್ಳಬೇಕಷ್ಟೇ! ಅವಾಗಲೇ ನಾವು ಕ್ಯಾಡೆಟ್ ಸ್ಥಾನದಿಂದ ಸೈನಿಕರಾಗಿ ಅಥವಾ ಸರ್ಜೆಂಟ್.ಗಳಿಂದ ಮೇಜರ್.ಗಳಾಗಿ ಬೆಳೆಯುತ್ತೇವೆ. ಪ್ರಪಂಚದಲ್ಲಿರುವ ಎಲ್ಲಾ ಮಕ್ಕಳಗಳ ಜೀವನಗಳಲ್ಲಿ ವ್ಯತ್ಯಾಸವನ್ನುಂಟು ಮಾಡುವುದಕ್ಕೆ ದೇವರಿಂದ ನಾವೆಲ್ಲರು ಉಪಯೋಗಿಸಲ್ಪಡಬಹುದು.

ನಾವು ನಿಜವಾಗಿ ಯುದ್ಧದಲ್ಲಿದ್ದರೆ, ಪುಟಗಳಿಗೆ ಬಣ್ಣಗಳನ್ನು ಹಾಕುವುದು ಮತ್ತು ಸರಿಯಾದ "ಸಭೆಯ" ಉತ್ತರಗಳನ್ನು ಕಂಠಪಾಠ ಮಾಡುವುದೆನ್ನುವುದು ಇದನ್ನು ಕಡಿತ ಮಾಡಬಾರದು.

ನಾವು ಯುದ್ಧದಲ್ಲಿದ್ದೇವೆ, ಮತ್ತು ನಾವು ಅದನ್ನು ಮರೆಯಲೇಬಾರದು.

ನಾವು ನಿಜವಾಗಿ ಯುದ್ಧದಲ್ಲಿದ್ದರೆ, ದೇವರಿಗೆ ಒಳಗಾಗುತ್ತಿದ್ದೇವೆಂದು ನಟಿಸಿ, ಎಲ್ಲಾ ಸಮಯಗಳಲ್ಲಿ, ಸಭೆಯಲ್ಲಿ ನಡೆಯುವ ಕ್ರೈಸ್ತವ್ಯದ ರಾಜಕೀಯಗಳ ಮೇಲೆ ಹೆಚ್ಚಾಗಿ ಕೇಂದ್ರೀಕರಿಸುವುದಕ್ಕೆ ಇದು ಕೆಲಸ ಮಾಡುವುದಿಲ್ಲ.

ಈ ಸೈನ್ಯದಲ್ಲಿ ನಮಗೆ ನಿಜವಾದ ಜೆನೆರಲ್.ಗಳು ಬೇಕಾಗಿದ್ದಾರೆ.

ಮುಂದೆ ಬರುವ ವಿಶ್ವಾಸಿಗಳ ತಲಾಂತರವನ್ನು ಎಬ್ಬಿಸುವುದಕ್ಕೆ ಕಷ್ಟಪಡುವುದಕ್ಕೆ ಇಷ್ಟಪಡುವ ದೇವರ ಜನರಾದ ಸ್ತ್ರೀ ಪುರುಷರು ನಮಗೆ ಬೇಕಾಗಿದ್ದಾರೆ.

ದೇವರ ಸೈನ್ಯದಲ್ಲಿ ನಾನು ಜೆನೆರಲ್ ಆಗುವುದಕ್ಕೆ ತವಕ ಪಡುತ್ತಿದ್ದೇನೆ. ನೀವೂ ನನ್ನೊಂದಿಗೆ ಸೇರುವಿರೋ?

ಕ್ರಿಸ್ತನಲ್ಲಿ, ಕ್ರಿಸ್ಟಿನಾ

ಮಕ್ಕಳ ಸೇವೆಗಾಗಿ ಉಚಿತವಾದ ಸಂಪನ್ಮೂಲಗಳು

www.ChildrenAreImportant.com

ಯಾವುದೇ ಹಕ್ಕುಸ್ವಾಮ್ಯವಿಲ್ಲಾ. ಹೌದು!
ನಿಮಗೆ ಬೇಕಾದಷ್ಟು ಮುದ್ರಿಸಿಕೊಳ್ಳಿರಿ ಮತ್ತು ಮುಂದುವರೆಯಿರಿ. ನೀವು ಅವುಗಳನ್ನು ಮಾರಟ ಮಾಡಬಹುದು!
ಮತ್ತು ಅವು ನಮ್ಮ ವೆಬ್‌ಸೈಟಿನಲ್ಲಿ ಯಾವಾಗಲು ಉಚಿತವಾಗಿ ಸಿಗುತ್ತವೆ.

ಯಾಕಂದರೆ ನಾವು ಒಟ್ಟಾಗಿ ಕೆಲಸ ಮಾಡುವದರಿಂದ ಕರ್ತನಿಗಾಗಿ ಅನೇಕ ಮಕ್ಕಳನ್ನು ಸೇರಬಹುದು!

Vision Rise up
Warrior Kannada
20132

www.ChildrenAreImportant.com
info@childrenareimportant.com
We are located in Mexico.

ಮಕ್ಕಳೇ ಪ್ರಮುಖರು